# ನೀಲಿನೊಳಗಿನ ಮಂಜು

■ ಡಾ.ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ಮಾತು-ಕತೆ, ಮುನಿಸು ಮತ್ತು ಊಟದ ಸೊಗಸು



ರಾಯರು ಸೋಫಾದಲ್ಲಿ ಕುಳಿತುಕೊಳ್ಳುತ್ತಾ 'ಸರೋಜ, ನಿನಗೆ ಒಂದು ಹ್ಯಾಪಿ ನ್ಯೂಸ್. ನಮ್ಮ ಸತೀಶನ ಹೆಂಡತಿಗೆ ನಮ್ಮ ಕಾಲೇಜಿನಲ್ಲೇ ಅಪಾಯಿಂಟ್‌ಮೆಂಟ್ ಆಗಿದೆ. ಅದಕ್ಕೆ ಇದು ಸತೀಶ ಕೊಟ್ಟ ಗಿಫ್ಟ್' ಎಂದಿದ್ದರು.

ತಕ್ಷಣ ಸರೋಜಮ್ಮನ ಮುಖ ಕೆಂಪೇರಿತ್ತು. ಆ ಎರಡೂ ಪ್ಯಾಕೆಟ್‌ಗಳನ್ನು ರಾಯರ ಕೈಯಲ್ಲಿ ಕುಕ್ಕಿದ ಆಕೆ, 'ಶುರುವಾಯ್ತು ಮತ್ತೆ ನಿಮ್ಮ ಲೋಕಸೇವೆ. ನೀವೇ ತಾನೇ ಆ ಜಯಂತಿಯ ಅಪಾಯಿಂಟ್‌ಮೆಂಟಿನಲ್ಲಿ ಪ್ರಭಾವ ಬೀರಿದ್ದು?' ಎಂದು ಖಾರವಾಗಿ ಪ್ರಶ್ನಿಸಿದ್ದರು.

'ಹೌದು ನಾನೇ! ಏನೀಗ?'

'ನಿಮಗೆ ಯಾಕ್ರೀ ಲೋಕೋದ್ಧಾರದ ಕೆಲಸ? ನನ್ನ ಬಗ್ಗೆ ಯಾವತ್ತಾದರೂ ಇಷ್ಟು ಸೀರಿಯಸ್ಸಾಗಿ ಯೋಚಿಸಿದ್ದುಂಟಾ ನೀವು?'

'ಯಾರು ಹೇಳಿದ್ದು ಯೋಚಿಸಿಲ್ಲ ಅಂತ?'

'ಹೌದು ಯೋಚಿಸಿದ್ದೀರಿ, ಯಾವಾಗ ಹೇಳಿ? ಸುಮ್ಮನೆ ಮನೆಗೆ ಬೇಕಾದ್ದನ್ನೆಲ್ಲ ತಂದು ಹಾಕಿ, ಸೀರೆ ಒಡವೆ ಮಾಡಿಸಿಕೊಟ್ಟರೆ ಮುಗೀತಾ? ಒಂದು ದಿನ ನಾವು ಹಾರುವ ಹಕ್ಕಿಗಳ ಹಾಗೆ ಎಲ್ಲಿಗಾದರೂ ಟೂರ್ ಹೋದದ್ದು ಇದೆಯಾ? ನಾನು ಪ್ರತಿ ವರುಷವೂ ವೆಕೇಶನ್ ರಜೆಯಲ್ಲಿ ಎಲ್ಲಿಗಾದರೂ ಟೂರ್ ಹೋಗೋಣ ಅಂತ ಹೇಳುತ್ತಲೇ ಬಂದಿದ್ದೇನೆ. ಈ ವರ್ಷ ಆಗಲ್ಲ, ಮುಂದಿನ ವರುಷ ಖಂಡಿತ ಹೋಗೋಣ ಎನ್ನುತ್ತಿದ್ದ ನೀವು ಈ ಇಷ್ಟು ವರುಷಗಳಲ್ಲಿ ನನ್ನನ್ನು ಎಲ್ಲಿಗೆ ಕರಕೊಂಡು ಹೋಗಿದ್ದೀರಿ? ನನ್ನ ಬಂಧುಗಳು ಮುಂಬೈಯಲ್ಲಿದ್ದಾರೆ, ಮದ್ರಾಸಿನಲ್ಲಿದ್ದಾರೆ. ಅಲ್ಲಿಗಾದರೂ ಹೋಗಿ ಬರೋಣ ಅಂದರೆ, ನೀನು ಹೋಗು, ನಾನು ಬರೋದಿಲ್ಲ. ಅವರು ನನ್ನನ್ನು ನಿನ್ನ ಗಂಡ ಅಂತ ಒಪ್ಪಿಕೊಂಡ ಹಾಗೆ ಇನ್ನೂ ವರ್ತಿಸೋದಿಲ್ಲ! ಅವರಿಗೆ ನೀನು ಬಂದಿದ್ದಿ ಎಂದು ನಾನ್ವೆಜ್ ಐಟಂ ಮಾಡಲು ಮನಸ್ಸಿದ್ದರೂ ನಾನು ಕೋಳಿ ತಿನ್ನೋದಿಲ್ಲ ಎಂಬ ಅಸಮಾಧಾನ ಇದೆ. 'ಹೇಗಿದ್ದೀಯೇ ನೀನು ಇಷ್ಟು ದಿನ ಕೋಳಿ ತಿನ್ನದೆ? ನಮಗೋ ವಾರಕ್ಕೆ ಮೂರು ಸಲವಾದರೂ ಕೋಳಿ ಬೇಕು' ಎಂದು ಅವರು ನಿನಗೆ ಹೇಳುವಾಗ, ನೀನು ಅಲ್ಲಿಂದ ಎದ್ದು ಹೋಗುತ್ತಿರುವುದನ್ನು ನೋಡಿ ಅವರು, 'ಈ ಪುಳಿಚ್ಚಟ್ಟು ಬ್ರಾಹ್ಮಣನನ್ನು ಕಟ್ಟಿಕೊಂಡು ಹಾಳಾದಿ' ಎಂದು ನನ್ನನ್ನು ಹಂಗಿಸುವುದನ್ನು ನೋಡಿದ ನೀವು, 'ನೀನು ಹೋಗೇ, ನಾನು ಬರೋದಿಲ್ಲ!' ಎನ್ನಲು ಹತ್ತಿದಿರಿ. ನಾನು ನಿಮ್ಮಲ್ಲಿ ಎಷ್ಟು ಜಗಳ ಆಡಿದರೂ ನಿಮ್ಮನ್ನು ಬಿಟ್ಟು ಒಬ್ಬಳೇ ಎಲ್ಲಿಗೂ ಹೋಗುವುದಿಲ್ಲ ಅಂದಾಗ, ನೀವು 'ಹಟ ಹಿಡಿಯಬೇಡ ಸರೋಜ, ನೀನು ಹೋಗು' ಎಂದು ಎನ್ನುತ್ತಿದ್ದೀರಾದರೂ, ನನಗೆ ಹಾಗೆ ಹೋಗಲು ಮನಸ್ಸಾಗುತ್ತಿರಲಿಲ್ಲ. ಯಾಕೆ ಗೊತ್ತುಂಟಾ? ನಾನು ನಿಮ್ಮನ್ನು ಅಷ್ಟು ಪ್ರೀತಿಸುತ್ತೇನೆ. ಆದರೆ ನೀವು ನನ್ನನ್ನು ವಿವಾಹಪೂರ್ವದಲ್ಲಿ ಮಾತ್ರ ಪ್ರೀತಿಸಿದ್ದು. ಆಮೇಲಿನ ನಿಮ್ಮ ಪ್ರೀತಿಯಲ್ಲಿ ಕೃತಕತೆ ಇಲ್ಲದೇ ಇರಬಹುದಾದರೂ ಅದರಲ್ಲಿ ಥ್ರಿಲ್ ಇರಲಿಲ್ಲ ಎಂದು ನನಗೆ ಗೊತ್ತಾಗಿತ್ತು. ಅಷ್ಟೇ ಅಲ್ಲ, ನಾನು ನನ್ನ ಬಂಧುಗಳ ಮನೆಗೆ ನಿಮ್ಮನ್ನು ಬಿಟ್ಟು ಹೋದರೆ ನಿಮಗೆ ಖಂಡಿತ 'ಅನ್ ಇಸೀ' ಅಂತ ಅನಿಸೋದಿಲ್ಲ ಅಂತಲೂ ನನಗೆ ಗೊತ್ತಾಗಿತ್ತು. ಬಟ್ ನಾನು ಹೋದರೆ ಅಲ್ಲಿ ನೀವಿಲ್ಲದೆ ನಾನು ನೀರಿನಿಂದ ಮೇಲೆ ಬಿದ್ದ ಮೀನಿನ ಹಾಗೆ ಇರುತ್ತೇನೆ ಎನ್ನುವುದು ನಿಮಗೆ ಗೊತ್ತಾದದ್ದೇ ಇರಲಿಲ್ಲ' ಎಂದು ಹೇಳುತ್ತಿದ್ದಂತೆ ರಾಯರು, 'ಸರೋಜ, ದಯವಿಟ್ಟು ಈಗ ಈ ಪುರಾಣ ನಿಲ್ಲಿಸು. ಸ್ಸಾರಿ ಸ್ಸಾರಿ ಅಂತ ಮೂರು ಸಲ ಹೇಳುತ್ತಿದ್ದೇನೆ. ಕಿವಿ ಹಿಡಿದು ಬಸ್ಕಿ ಬೇಕಾದರೂ ತೆಗೆಯುತ್ತೇನೆ' ಎಂದು ಸರೋಜಮ್ಮನ ಮಾತುಗಳಿಗೆ ರಾಯರು ತಡೆ ಹಾಕುತ್ತಿದ್ದರು.

ಆ ದಿನ ಮತ್ತೆ ಇಬ್ಬರಲ್ಲೂ ಮಾತುಕತೆಯೇ ಇರಲಿಲ್ಲ. ಯಾಂತ್ರಿಕವಾಗಿ ಊಟ ಮುಗಿದು ಇಬ್ಬರೂ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದರು. ನಡುರಾತ್ರೆ ಕಳೆದ ಮೇಲೆ ರಾಯರು ಹೆಂಡತಿಯ ಪಕ್ಕಕ್ಕೆ ಬಂದು ನಿಧಾನವಾಗಿ ಅವಳನ್ನು ಬಳಸಿ ತುಟಿಗೆ ತುಟಿ ಸೇರಿಸಿ ಪಿಸುಮಾತಿನಲ್ಲಿ 'ಒಪ್ಪಿಗೆಯಾ?' ಎನ್ನುವಂತೆ ಕೇಳಬೇಕೆನ್ನುವಷ್ಟರಲ್ಲಿ ರಾಯರನ್ನು ದೂರತಳ್ಳಿದ ಸರೋಜಮ್ಮ, 'ಹೋಗ್ರಿ ಆಚೆ, ಯಾರಿಗೆ ಬೇಕು ನಿಮ್ಮ ರಸಿಕತೆ? ಇದನ್ನೆಲ್ಲ ನೀವು ಇಷ್ಟಪಟ್ಟವರಲ್ಲಿ ಹಂಚಿಕೊಳ್ಳಿ' ಎಂದಿದ್ದರು.

ಇದಾದ ಎರಡು ದಿನ ರಾಯರ ಮನೆಯಲ್ಲಿ